ಪರಿಚಿತರೇ ಎನ್ನುವ ಭಾವನೆಯಲ್ಲಿ ನೋಡುತ್ತಿದ್ದೀರಿ. ಇಲ್ಲಿ ಬಂದಿರುವವರು ನಿಮಗೆ ಪರಿಚಯವೇ ಇಲ್ಲ, ಕೇವಲ ರಜನಿ ಮಾತ್ರ ಅಂದಿರಿ? ಏನು ಹೇಳುತ್ತೀರಿ?''

ಅಲ್ಲಿಯವರೆಗೆ ತನ್ನ ಪೆದ್ದು ಪೆದ್ದು ಮಾತುಗಳು ಹಾವ ಭಾವಗಳಿಂದ ಈ ಕೇಸ್ ಮುಗಿದರೆ ಸಾಕಪ್ಪಾ ಎಂದು ತೋರಿಸಿಕೊಳ್ಳುತ್ತಿದ್ದ ನಾಗರಾಜಯ್ಯನ ಮಾತುಗಳು ಎಲ್ಲರನ್ನೂ ದಂಗು ಬಡಿಸಿದವು.

"ನೋಡಿ ನನ್ನ ಬಟ್ಟೆ ನೋಡಿ ಅನುಮಾನ ಪಡೋದು, ನನ್ನ ವರ್ತನೆ ನೋಡಿ ಅನುಮಾನ ಪಡೋದು, ಎಲ್ಲ ಸರಿ. ಆದರೆ ನಿಮ್ಮ ಮಾತುಗಳಲ್ಲಿ ನಾನೂ ಈ ಕೊಲೆಯ ಸಂಚಿನಲ್ಲಿ ಭಾಗಿಯಾಗಿದ್ದೇನೆ ಎಂಬುದು ವ್ಯಕ್ತ ಆಗ್ತಾ ಇದೆ. ಈ ಥರಾ ಏನಾದರು ನಿಮ್ಮ ಮನಸ್ಸಿನಲ್ಲಿ ಇದ್ದರೆ ತೆಗೆದು ಬಿಡಿ... ನಾನು ಇವರ ಲಾಯರ್ ಅಷ್ಟೆ!''

ಲಾಯರ್ ನಾಗಭೂಷಣ ಅವರ ಮಾತುಗಳು ಕೇಳಲೇ ಇಲ್ಲ ಎಂಬಂತೆ ''ಏನಯ್ಯ ಸುನೀಲ್ ಇಲ್ಲಿಗೆ ನಿನ್ನೆ ಬಂದೆ ಅನ್ನುತ್ತೀಯ. ಈ ಮನೆಯ ಎಲ್ಲ ಬಾಗಿಲು ಎಲ್ಲಿದೆ ಅದರ ಒಳಗಡೆ ಹೊರಗಡೆ ಹೋಗುವುದು ಹೇಗೆ ಎಲ್ಲಾ ತಿಳಿದಿದೆ ನಿನಗೆ? ಹೇಗೆ ನೀನು ವಿಶ್ವನಾಥ ಅವರ ತಮ್ಮನ ಮಗ ಅಂತೀಯಾ? ಆದರೆ ಇವರ್‍ಯಾರಿಗೂ ನೀನು ಗೊತ್ತಿಲ್ಲ. ನೀನು ಗೊತ್ತಿಲ್ಲದವನಾದರೂ ಎಲ್ಲರೂ ನೀನು ತಮ್ಮವರಲ್ಲೊಬ್ಬ ಎಂಬಂತೆಯೇ ವರ್ತಿಸುತ್ತಿದ್ದಾರೆ. ಇದರಿಂದ ಅನುಮಾನ ಬರುವುದಿಲ್ಲವೇ..."

ಕಬ್ಬಿಣದ ಗುಂಡುಗಳಂಥಾ ನಾಗರಾಜಯ್ಯನ ಒಂದೊಂದು ಮಾತುಗಳು ಎಲ್ಲರ ಬಾಯಿ ಮುಚ್ಚಿಸಿದವು ನಾಗರಾಜಯ್ಯ ಮುಂದುವರೆಸಿದ:

"ವಿಶ್ವನಾಥ್ ಅವರ ಎದೆಗೆ ಗುಂಡು ಬಿದ್ದಿದೆ ಅಂದರೆ ಗುಂಡು ಬಿದ್ದ ಒಂದು ಎರಡು ನಿಮಿಷ ಪ್ರಾಣ ಇರಬೇಕು. ಎಗ್ಸಿಟ್ ಗಾಯದಿಂದ ಬುಲೆಟ್ ಹೊರಬಂದಿದ್ದರೂ ಫೊರೆನ್ಸಿಕ್‌ನವರಿಗೆ ಸಿಕ್ಕಿಲ್ಲ. ಮನೆಯಲ್ಲಿ ಎಲ್ಲಿಯೂ ಗುಂಡು ತಗುಲಿದ ಲಕ್ಷಣಗಳಿಲ್ಲ. ಅಂದರೆ ಪಿಸ್ತೂಲಿನ ಮುಂದೆ ಸದ್ದು ಬಾರದಂತೆ ವಸ್ತುವನ್ನು ಇಟ್ಟು ಹೊಡೆದಿರಬೇಕು ಮತ್ತು ಅದನ್ನು ಇನ್ನೊಬ್ಬ ಹಿಂದಿನಿಂದ ಇನ್ನೊಂದು ವಸ್ತು ಅಂದರೆ, ದಿಂಬು ಅಥವಾ ಇನ್ಯಾವುದೋ ವಸ್ತುವಿನಿಂದ ತಡೆದಿರಬೇಕು.''

ಇಡಿ ರೂಂನಲ್ಲಿ ಎ.ಸಿ.ಯ ಸದ್ದು ಬಿಟ್ಟರೆ ಇನ್ಯಾವುದೇ ಸದ್ದೂ ಕೇಳಿಸುತ್ತಿರಲಿಲ್ಲ. ಪೊಲೀಸ್‌ನವರೂ ಕೂಡಾ ಒಂದು ಕ್ಷಣ ದಂಗಾದರು. ಎಲ್ಲರೂ ತಮ್ಮ ತಮ್ಮ ಕೆಲಸ ಬಿಟ್ಟು ನಾಗರಾಜಯ್ಯನನ್ನೇ ನೋಡತೊಡಗಿದರು. ಅವರಿಗೆ ಇಡೀ ಕೊಲೆಯ ರಹಸ್ಯ ಇನ್ನೇನು ಭೇದಿಸಲ್ಪಟ್ಟಿತು ಎನ್ನಿಸತೊಡಗಿತು.

"ಅಂದರೆ ಇಲ್ಲಿ ಕೊಲೆಗಾರ ಒಬ್ಬನಲ್ಲ ಇಬ್ಬರು ಅಥವಾ ಇನ್ನೂ ಹೆಚ್ಚು ಜನ...'' ಎಂದು ನಾಗರಾಜಯ್ಯ ಹೇಳಿದಾಗ ಎಲ್ಲರ ಮುಖಗಳ ರಕ್ತಸಂಚಾರ ಒಂದುಕ್ಷಣ ನಿಂತಂತಾಯಿತು.

ಪೆದ್ದನಂತೆ ವರ್ತಿಸುತ್ತಿದ್ದ ಇನ್‌ಸ್ಪೆಕ್ಟರ್ ತನ್ನ ಪೊಲೀಸ್ ವೃತ್ತಿಯ ಕೌಶಲ್ಯವನ್ನು, ಮೂವತ್ತೈದು ವರ್ಷದ ಅನುಭವ ಏನು ಎಂಬುದನ್ನು ತೋರಿಸತೊಡಗಿದ. ಎಚ್ಚೆತ್ತ ಕಾನ್‌ಸ್ಟೆಬಲ್‌ಗಳು ಶವ ತಿರುಗಿಸಲು ಪ್ರಯತ್ನಿಸುವಷ್ಟರಲ್ಲಿಯೇ ''ಇರಪ್ಪಾ ಇನ್ನೂ ಮುಗಿದಿಲ್ಲ'' ಎಂದ ನಾಗರಾಜಯ್ಯ.

"ಇಲ್ಲಿರುವ ಪ್ರತಿಯೊಬ್ಬರಿಗೂ ಈ ಸತ್ತ ಮನುಷ್ಯನ ಹತ್ತಿರ ಹಣಕಾಸಿನ ವ್ಯವಹಾರ ಇದೆ. ಎಲ್ಲರಿಗೂ ಇವರ ಹಣ ಬೇಕು. ಎಲ್ಲರೂ ಸೇರಿ ಏನಾದರೂ ಪ್ಲಾನ್ ಯಾಕೆ ಮಾಡಿರಬಾರದು?"

ನಿಧಾನವಾಗಿ ಆಡಿದ ಮಾತುಗಳಾದರೂ ಒಂದೊಂದೂ ಎಲ್ಲರಿಗೂ ಸಹಸ್ರ ಮೈಲುಗಳ ವೇಗದಲ್ಲಿ ಬಂದು ಅಪ್ಪಳಿಸಿದಂತೆ ಆಯಿತು. ಅಲ್ಲಿಯವರೆಗೂ ಸುಮ್ಮನಿದ್ದ ವಿಶಾಲಾಕ್ಷಮ್ಮ